12-12-2024

(17)

**ವಿಧಾನ ಪರಿಷತ್ತ ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ರವರು ಮಂಡಿಸಿರುವ ಶೂನ್ಯವೇಳೆ ಸೂಚನೆಗೆ ಉತ್ತರ:**

**ಪ್ರಶ್ನೆ** : ಅತ್ಯಾಚಾರ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಸುವ ಬಗ್ಗೆ.

**ಉತ್ತರ:** ಫಿರ್ಯಾದುದಾರ ಮಗಳಾದ ನೊಂದ ಬಾಲಕಿ ತಾ॥ ಯಡ್ರಾಮಿಯಲ್ಲಿನ ಖಾಸಗಿ ನವೋದಯ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಸದರಿ ಶಾಲೆಯ ಶಿಕ್ಷಕನಾದ ಆರೋಪಿ ಹಾಜಿಮಲಂಗ ಈತನು ರಾತ್ರಿ ಸಮಯದಲ್ಲಿ ಟ್ಯೂಷನ್ ಹೇಳುತ್ತೇನೆ ಅಂತಾ ನೊಂದ ಬಾಲಕಿಗೆ ಮತ್ತು ಇತರೆ ಕೆಲವು ಮಕ್ಕಳಿಗೆ ರಾತ್ರಿ ಶಾಲೆಯಲ್ಲಿಯೇ ಮಲಗಿಸಿಕೊಂಡು ಬೆಳಗ್ಗೆ ಕಳುಹಿಸುತ್ತಿದ್ದು ದಿನಾಂಕ:16-05-2024 ರಂದು ಬೆಳಗ್ಗೆ: 07-00ಗೆ ನೊಂದ ಬಾಲಕಿ ಇವಳು ಶಾಲೆಯಲ್ಲಿ ಕಸ ಗುಡಿಸುತ್ತಿರುವಾಗ ಆರೋಪಿತನು ಹೆದರಿಸಿ ನೊಂದ ಬಾಲಕಿಯನ್ನು ಇಚ್ಛೆಗೆ ವಿರುದ್ಧವಾಗಿ ಹಲವಾರು ಬಾರಿ ಲೈಂಗಿಕವಾಗಿ ಬಳಸಿಕೊಂಡಿದ್ದು, ದಿನಾಂಕ 29-11-2024 ರಂದು ರಾತ್ರಿ: 11-30ಕ್ಕೆ ನೊಂದ ಬಾಲಕಿ ಇವಳು ನವೋದಯ ಕಿರಿಯ ಪ್ರಾಥಮಿಕ ಶಾಲೆಯ ಕೋಣೆಯಲ್ಲಿ ಮಲಗಿಕೊಂಡಿರುವಾಗ ಆರೋಪಿತನು ನೊಂದ ಬಾಲಕಿಗೆ ಲೈಂಗಿಕ ದೌರ್ಜನ್ಯವೆಸಗಿ ಯಾರಿಗೂ ಹೇಳದಂತೆ ಜೀವಬೆದರಿಕೆ ಹಾಕಿದ ಬಗ್ಗೆ ದಿನಾಂಕ: 03-12-2024 ರಂದು ಫಿರ್ಯಾದಿ ನೀಡಿದ ದೂರಿನ ಮೇಲೆ ಯಡ್ರಾಮಿ ಪೊಲೀಸ್ ಠಾಣೆ ಗುನ್ನೆ ನಂ.166/2024 ಕಲಂ: 126(2), 351(2), 64(2)(ಎಂ), 65(2) ಬಿ.ಎನ್.ಎಸ್ ಮತ್ತು 4, 6, 12 ಪೋಕ್ಸೋ ಕಾಯ್ದೆ ಹಾಗೂ 3(1)(ಆರ್)(ಡಬ್ಲು), 2(5) ಎಸ್.ಸಿ/ಎಸ್.ಟಿ ಪಿಎ ಆಕ್ಟ್ ಪ್ರಕರಣ ದಾಖಲಿಸಲಾಗಿರುತ್ತದೆ.

ಈ ಪ್ರಕರಣವನ್ನು ಅದೇ ದಿನ ದಿನಾಂಕ:03-12-2024ರಂದು ತನಿಖೆ ಕೈಕೊಂಡು ಪ್ರಕರಣ ವರದಿಯಾದ ಕೇವಲ 5 ಗಂಟೆಗಳ ಒಳಗಾಗಿ ಆರೋಪಿ ಹಾಜಿಮಲಂಗ ತಂದೆ ಮಹಿಬೂಬ್ ಗಣಿಯಾರ ವಯಸ್ಸು:45ವರ್ಷ, ಉದ್ಯೋಗ: ಶಿಕ್ಷಕ ಸ್ಥಳ: ಯಡ್ರಾಮಿ, ಈತನನ್ನು ವಶಕ್ಕೆ ಪಡೆದು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿರುತ್ತದೆ. ಅದೇ ದಿನದಂದು ನೊಂದ ಬಾಲಕಿ ಕುಟುಂಬಕ್ಕೆ ಪರಿಹಾರ ಧನವನ್ನು ಮಂಜೂರು ಮಾಡುವಂತೆ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ ರವರಿಗೆ ದಿನಾಂಕ:03-12-2024 ಪತ್ರ ವ್ಯವಹಾರ ಮಾಡಿ ನೊಂದ ಬಾಲಕಿಯ ಕುಟುಂಬಕ್ಕೆ ಪರಿಹಾರ ದೊರಕುವಂತೆ ಕ್ರಮ ಕೈಗೊಳ್ಳಲಾಗಿರುತ್ತದೆ. ಅದರಂತೆ, ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆ ರವರು (ಚೆಕ್ ನಂ: 396580 ದಿನಾಂಕ: 03-12-2024) ರೂ.50,000/- ಗಳ ಪರಿಹಾರವನ್ನು ವಿತರಿಸಿರುತ್ತಾರೆ. ಪ್ರಸ್ತುತ ಪ್ರಕರಣವು ತನಿಖೆಯಲ್ಲಿರುತ್ತದೆ.

ಹೆಚ್‌ಡಿ 73 ಎಸ್‌ಡಿಎನ್ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು